ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ4(2): ಪ್ರೌಶಾಶಿಜೇ.ಪ37/2018-19 ದಿನಾಂಕ: 12-06-2019

### ಜ್ಞಾಪನ

ವಿಷಯ: ಸರ್ಕಾರಿ ಪ್ರೌಢ ಶಾಲಾ ಗ್ರೇಡ್-2 ವೃಂದದ ಸಹ ಶಿಕ್ಷಕರುಗಳ ದಿನಾಂಕ:01-01-1979 ರಿಂದ 31-12-2018 ರವರೆಗಿನ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 31-12-2018 ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ186ಎಸ್‌ಆರ್‌ಎಸ್2018 ದಿನಾಂಕ:27/02/2019.
2.ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ186ಎಸ್‌ಆರ್‌ಎಸ್2018 ದಿನಾಂಕ:05/03/2019.
3.ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ186ಎಸ್‌ಆರ್‌ಎಸ್2018 ದಿನಾಂಕ:15/05/2019.
4.ಈ ಕಛೇರಿ ಪತ್ರ ಸಂಖ್ಯೆ ದಿನಾಂಕ:18/03/2019. 24/09/2018. ಮತ್ತು 20/05/2019.

----****----

ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರ ವರದಿಯನ್ವಯ ಬೆಂಗಳೂರು ಮತ್ತು ಮೈಸೂರು ವಿಭಾಗ ವ್ಯಾಪ್ತಿಯ ಸರ್ಕಾರಿ ಪ್ರೌಢಶಾಲಾ ಗ್ರೇಡ್-2 ವೃಂದದ ಸಹ ಶಿಕ್ಷಕರುಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಸುಮಾರು 18,755 ಶಿಕ್ಷಕರ ವಿವರಗಳಿದ್ದು, ಅವರ ಮಾಹಿತಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ದಿನಾಂಕ:01-01-1978 ರಿಂದ 31-12-1994 ರವರೆಗಿನ ಅವಧಿಯನ್ನು ಭಾಗ-1 ಎಂದು ಹಾಗೂ 01-01-1995 ರಿಂದ ದಿನಾಂಕ:31/12/2018 ರವರೆಗಿನ ಅವಧಿಯನ್ನು ಭಾಗ-2 ಎಂದು ಪರಿಗಣಿಸಲಾಗಿದೆ. ಭಾಗ-1 ಮತ್ತು ಭಾಗ-2 ರ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ವಿವರಗಳನ್ನು ಇಲಾಖಾ ವೆಬ್ ಸ್ಟೈಟ್‌ನಲ್ಲಿ www.schooleducation.kar.nic.in ನಲ್ಲಿ ಬೆಂಗಳೂರು ಮತ್ತು ಮೈಸೂರು ವಿಭಾಗದ ಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಕಟಿಸಿದ್ದು, ಸದರಿ ಪಟ್ಟಿಗೆ ಆಕ್ಷೇಪಣೆಗಳು ಇದ್ದಲ್ಲಿ ಜ್ಞಾಪನ ಹೊರಡಿಸಿದ 7 ದಿನಗಳೊಳಗೆ ಸಂಬಂಧಿಸಿದ ಶಿಕ್ಷಕರು ಸಮುಚ್ಚಿತ ಮಾರ್ಗದಲ್ಲಿ ಸಲ್ಲಿಸಲು ತಿಳಿಸಿದೆ. ನಂತರದ ದಿನಗಳಲ್ಲಿ ಸಲ್ಲಿಸಿದ ಆಕ್ಷೇಪಣೆಗಳನ್ನು ಸ್ವೀಕರಿಸುವುದಿಲ್ಲ.

ನಿರ್ದೇಶಕರು (ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ:-

1. ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-560001 ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
2. ವಿಭಾಗೀಯ ಸಹನಿರ್ದೇಶಕರು ಬೆಂಗಳೂರು ವಿಭಾಗ ಮತ್ತು ಮೈಸೂರು ವಿಭಾಗ ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
3. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಉಪನಿರ್ದೇಶಕರು (ಆಡಳಿತ), ಇವರಿಗೆ ಅಗತ್ಯ ಕ್ರಮಕ್ಕಾಗಿ ಹಾಗೂ ಆಕ್ಷೇಪಣೆಗಳನ್ನು ಕ್ರೋಡಿಕರಿಸಿ ದಿನಾಂಕ:20-06-2019ರೊಳಗೆ ಖುದ್ದಾಗಿ ಈ ಕಛೇರಿಗೆ ಸಲ್ಲಿಸುವುದು. ನಂತರ ಬಂದ ಆಕ್ಷೇಪಣೆಗಳನ್ನು ಈ ಕಛೇರಿಯಲ್ಲಿ ಸ್ವೀಕರಿಸಲಾಗುವುದಿಲ್ಲ.
4. ಕಛೇರಿ ಪ್ರತಿ.

C:\Users\Vijay\Desktop\SENI DOCUMENTS.docx